# ಸ್ವಾತಂತ್ರ್ಯೋತ್ಸವ ದಿನಾಚರಣೆ

**ಚಿತ್ರದುರ್ಗ ಆ. 15 :** ಮುರುಘಾಮಠದಲ್ಲಿ ನಡೆದ 74ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ಶಿವಮೂರ್ತಿ ಮುರುಘಾ ಶರಣರು ಧ್ವಜಾರೋಹಣ ನೆರವೇರಿಸಿದರು.





ನಂತರ ಮಾತನಾಡಿದ ಶ್ರೀಗಳು, ಭಾರತ ದೇಶವು 74 ವರ್ಷಕ್ಕಿಂತ ಮುನ್ನ ಬ್ರಿಟೀಷರ ಅಡಿಯಾಳಾಗಿತ್ತು. ಬ್ರಿಟೀಷರ ದಾಸ್ಯದಲ್ಲಿ ಜೀವನ ಸಾಗಿಸುತ್ತಿತ್ತು. ಮಹಾತ್ಮ ಗಾಂಧೀಜಿ, ಸುಭಾಷ್‌ಶ್ಚಂದ್ರಭೋಸ್, ಲೋಕಮಾನ್ಯ ಗಂಗಾಧರ ತಿಲಕ್ ಮೊದಲಾದವರು ಸ್ವಾತಂತ್ರ್ಯಕ್ಕಾಗಿ ಹೋರಾಟ ಆರಂಭಿಸಿದರು. ಅದು ಸ್ವಾತಂತ್ರ್ಯದ ಹೋರಾಟ ಅನ್ನಿಸಿಕೊಂಡಿತು. 1947ನೇ ಆಗಸ್ಟ್‌ನಲ್ಲಿ ನಮಗೆ ಸ್ವಾತಂತ್ರ್ಯ ಸಿಕ್ಕಿತು. ಸ್ವಾತಂತ್ರ್ಯಕ್ಕಿಂತ ಮೊದಲು ಒಂದೇ ಒಂದು ಸಮಸ್ಯೆ ಇತ್ತು. ಅದೇನೆಂದರೆ, ನಾವು ಸ್ವಾತಂತ್ರ್ಯ ಪಡೆಯಬೇಕೆಂಬುದು. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಹತ್ತು ಹಲವು ಸಮಸ್ಯೆಗಳು ಕಾಡುತ್ತಿವೆ. ಭಾರತೀಯರು ಭಾರತೀಯರನ್ನು ಆಳುತ್ತಿರುವ ಸಂದರ್ಭದಲ್ಲಿ ಜ್ವಲಂತ ಸಮಸ್ಯೆಗಳಿವೆ. ಎಲ್ಲ ಸಮಸ್ಯೆಗಳು ನಿವಾರಣೆ ಮಾಡಿ ಸ್ವಾಭಿಮಾನ ಉಳಿಸಿಕೊಳ್ಳಬೇಕು. ಸ್ವಾಭಿಮಾನ ಪೂರ್ಣವಾದ ಬದುಕು ನಮ್ಮದಾಗಬೇಕು. ಅಂತಹ ಬದುಕು ನಮ್ಮದಾದರೆ ಬಲಿಷ್ಠ ಭಾರತವಾಗುತ್ತದೆ.

ಅದು ಸನ್ನಡತೆಯ ಭಾರತ. ಸನ್ನಡತೆಯ ಮೂಲಕ ರಾಷ್ಟ್ರಕ್ಕೆ ಗೌರವ ಸಲ್ಲಿಸಬೇಕು. ಅದು ನಮ್ಮ ಸುಖ. ಸ್ವಾತಂತ್ರ್ಯ ದುಃಖ ನೀಡಬಾರದು; ಅದು ಸುಖ ನೀಡಬೇಕೆಂದರು.

ಈ ಸಂದರ್ಭದಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ. ದೊರೆಸ್ವಾಮಿ, ಸಂಸ್ಥೆಯ ಶಾಲಾಕಾಲೇಜುಗಳ ಮುಖ್ಯಸ್ಥರುಗಳು ಮುಂತಾದವರಿದ್ದರು.



